**<u>ದಿನಾಂಕ: 30-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಮುಂದುವರೆದ ಪಾಟೀ ಸವಾಲು ಎದುರದಾರರ ಪರ ಶ್ರೀ. ಕೆ.ಹೆಚ್.ಹೆಚ್. ವಕೀಲರಿಂದ:</u>**

13. ಮೊದಲನೇ ಹೆರಿಗೆ ಆದ ನಂತರ ನನ್ನ ಮಗುವಿಗೆ 11 ಗ್ರಾಂ ಬಂಗಾರ ಹಾಗೂ ನನಗೆ 3 ಗ್ರಾಂ ಬಂಗಾರ ಎದುರುದಾರ ಹಾಕಿರುತ್ತಾನೆ ಎಂದರೆ ಸರಿ. ಹೆರಿಗೆ ಆದ ನಂತರ 9 ತಿಂಗಳು ನನ್ನ ತವರುಮನೆಯಲ್ಲಿ ಇದ್ದು, ನಂತರ ಬೆಂಗಳೂರಿಗೆ ಎದುರುದಾರ ಕರೆದುಕೊಂಡು ಹೋಗಿರುತ್ತಾನೆ. ಬೆಂಗಳೂರಿಗೆ ಹೋದ ನಂತರ 3-4 ತಿಂಗಳು ವಾಸವಾಗಿದ್ದೇನು. ನನ್ನ ಮಗುವಿನ ಮೊದನೇ ಹುಟ್ಟು ಹಬ್ಬಕ್ಕೆ ನನ್ನ ತಾಯಿ ಬಂದಿರುತ್ತಾರೆ. ನನ್ನ ತಾಯಿ ನನ್ನ ಮಗಳನ್ನು ಕರೆದುಕೊಂಡು ಹೋಗುತ್ತೇನೆ ಎಂದು ಹೇಳಿ ಸಿಟ್ಟಿಗೆ ಬಂದು ನನ್ನ ತಾಯಿ ಒಬ್ಬರೆ ಬಂದಿರುತ್ತಾರೆ ಎಂದರೆ ಸರಿಯಲ್ಲ.

14. 3 ತಿಂಗಳ ನಂತರ ಎದುರುದಾರ ತನ್ನ ಮನೆಯಲ್ಲಿ ತಂದು ಬಿಟ್ಟಿದ್ದು, ನಂತರ ಅಲ್ಲಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾನೆ. ನಾನು ನನ್ನ ಗಂಡನ ಮನೆಯಲ್ಲಿ ಇರುವಾಗ ಪರೀಕ್ಷೆ ಬರೆಯಲು ಹೋಗುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಹೆರಿಗೆಗೆ ತವರುಮನೆಗೆ ಹೋದಾಗ ಪರೀಕ್ಷೆ ಬರೆದಿರುತ್ತೇನೆ ಎಂದು ನುಡಿ ಯುತ್ತಾರೆ. ಬೆಂಗಳೂರಿಗೆ ಕರೆದುಕೊಂಡ ಹೋದ ನಂತರ ಅಲ್ಲಿ 3 ತಿಂಗಳು ವಾಸವಾಗಿದ್ದೇನು. ಎರಡನೇ ಬಾರಿ ಗರ್ಭಿಣಿಯಾದಾಗ ಆಸ್ಪತ್ರೆಯ ಖರ್ಚು ವೆಚ್ಚಗಳನ್ನು ಎದುರುದಾರ ನೋಡಿಕೊಂಡಿರುತ್ತಾನೆ. ವಿಜಯಪುರದ ಚೌದ್ರಿ ಆಸ್ಪತ್ರೆಯಲ್ಲಿ 2 ನೇ ಮಗು ಜನಿಸಿರುತ್ತದೆ ಎಂದರೆ ಸರಿ. ಹೆರಿಗೆ ನಂತರ ನನ್ನ ಗಂಡನ ಮನೆಗೆ ಹೋಗಿರುತ್ತೇನೆ, ಅಲ್ಲಿ 6 ದಿನ ವಾಸವಾಗಿದ್ದೇನು. 6 ದಿನಗಳ ನಂತರ ನನ್ನ ತಾಯಿಯವರು ಮಹಿಳಾ ಸಂಘದವರನ್ನು ಕರೆದುಕೊಂಡು ಬಂದು ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ.

15. ನನಗೆ ಎದುರುದಾರರು ಯಾವುದೇ ಕಿರುಕುಳ ನೀಡದ್ದೆ ಇದ್ದರು ಸಹ ನಾನೆ ಕಿರುಕುಳ ನೀಡಿ, ನನ್ನ ತವರುಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಮಹಿಳಾ

ಸಂಘದವರು ಎದುರುದಾರರ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ. ಮಹಿಳಾ ಸಂಘದವರಿಗೆ ದೂರು ಸಲ್ಲಿಸಿದ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನಿಂದ ನಾನೆ ಜಗಳ ಮಾಡಿ, ಎದುರುದಾರ ಟ್ರಾನ್ಸ್ಫರ್ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರ ಸಾಕಷ್ಟು ಬಾರಿ ನನ್ನನ್ನು ಕರೆದುಕೊಂಡು ಹೋಗಲು ಬಂದಿರುತ್ತಾನೆ ಎಂದರೆ ಸರಿಯಲ್ಲ. ಎದುರುದಾರ ಮತ್ತು ನನ್ನ ಹಿರಿಯರು ನಮ್ಮ ನಡುವೆ ಪಂಚಾಯಿತಿ ಮಾಡಿರುತ್ತಾರೆ ಎಂದರೆ ಸರಿ. ಹಿರಿಯರ ಸಮಕ್ಷಮ ಎದುರುದಾರಿನಿಗೆ ಬೆಂಗಳೂರಿನಿಂದ- ಬ.ಬಾಗೇವಾಡಿಗೆ ಟ್ರಾನ್ಸ್ಫರ್ ತೆಗೆದುಕೊಳ್ಳಬೇಕೆಂದು ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

16. ಬ.ಬಾಗೇವಾಡಿಯಲ್ಲಿ ನನ್ನ ತಂದೆಯ ಸ್ವಂತ ಮನೆ ಇರುತ್ತದೆ ಎಂದರೆ ಸರಿ. ಎದುರುದಾರ ತಂದೆ-ತಾಯಿಗೆ ವಯಸ್ಸಾಗಿರುತ್ತದೆ ಎಂದರೆ ಸರಿಯಲ್ಲ, ಎದುರುದಾರನು ಒಬ್ಬನೇ ಕುಟುಂಬದಲ್ಲಿ ಕೆಲಸ ನಿರ್ವಹಿಸುತ್ತಾನೆ ಎಂದರೆ ಸರಿ. ಕುಟುಂಬದ ಜವಬ್ದಾರಿ ಎದುರುದಾರನ ಮೇಲೆ ಇರುತ್ತಾನೆ ಎಂದರೆ ಸರಿ. ಎದುರುದಾರನು ಎಲ್ಲ ವ್ಯವಸ್ಥೆಯನು ಮಾಡಿ ಕರೆದುಕೊಂಡು ಹೋಗಲು ತಯಾರು ಇರುತ್ತಾನೆ ಎಂದರೆ ನಾನು ಹೋಗಲು ತಯಾರಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರನ ಆಸ್ತಿ ದಾಖಲಾತಿ ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ನನಗೆ ಎದುರುದಾರನು ಬಡಿಗೆಯಿಂದ ಹಲ್ಲೆ ಮಾಡಿರುತ್ತಾರೆ ಎಂದು ತೋರಿಸಲು ಯಾವುದೇ ವೈಧ್ಯಕೀಯ ಪ್ರಮಾಣ ಪತ್ರ ಹಾಜರಪಡಿಸಿರುವುದಿಲ್ಲ. ಎದುರುದಾರನಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರದಲ್ಲಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರನು ಯಾವಾಗ ಎಷ್ಟ ವರಪೋಚಾರ ಕೇಳಿರುತ್ತಾನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಕ್ರಿಮಿನಲ್ ಮೀಸ್ 72/20224

ಪಿ.ಡಬ್ಲ್ಯೂ: 01

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

(ಶ್ರೀ ಅಮಿತ್ ಘಟ್ಟಿ)

ದಿವಾಣಿ ನ್ಯಾಯಾಧೀಶರು ಮತ್ತು

ನ್ಯಾಯಿಕ ದಂಡಾಧಿಕಾರಿಗಳು

ಬಸವನ ಬಾಗೇವಾಡಿ.